ಒ.ಎಸ್. ನಂಬರ್‌ಃ 89/2022
ಪಿಡಬ್ಲ್ಯೂಃ 1
ದಿನಾಂಕಃ 11.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ

ರಾಮರೆಡ್ಡಿಯವರು ನಮ್ಮ ಪಕ್ಕದ ಊರಿನವರು . ನನಗೆ ಸೇರಿದ ಯಾವುದಾದರೂ ಜಮೀನು ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ಇದೆಯೇ ಅಂದರೆ ಇಲ್ಲ ಎನ್ನುತ್ತಾರೆ . ದಾವಾ ಸ್ವತ್ತು ರಾಮರೆಡ್ಡಿಯವರಿಗೆ ಹೇಗೆ ಬಂದಿರುತ್ತದೆ ಎಂದರೆ ಅವರು ಶ್ರೀನಿವಾಸಪ್ಪ ಎನ್ನುವವರಿಂದ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ರಾಮರೆಡ್ಡಿಯವರ ಸ್ವಂತ ಊರು ಲಕ್ಕೇನಹಳ್ಳಿ ಎಂದರೆ ಸರಿ . ಅಲ್ಲಿ ಅವರಿಗೆ ಸ್ವಂತ ಜಮೀನು ಇದೆಯಾ ಅಂದರೆ ಇದೆ ಎನ್ನುತ್ತಾರೆ . ಎಷ್ಟು ಜಮೀನು ಇರಬಹುದು ಎಂದರೆ 4 ಎಕರೆ ಎನ್ನುತ್ತಾರೆ . ಕೃಷ್ಣಪ್ಪ ರಾಮರೆಡ್ಡಿಯ ಅಳಿಯ ನನಗೆ ಪರಿಚಯ . ಸದರಿಯವರು ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು . ಕರಾರಿನ ದಿನಾಂಕ ಏನು ಎಂದರೆ 07.12.2020 ಎನ್ನುತ್ತಾರೆ . ಜಮೀನು ಮರಾಟಕ್ಕೆ ಇದೆ ಮತ್ತು ರಾಮರೆಡ್ಡಿಯವರು ಸದರಿ ಜಮೀನನ್ನು ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಯಾವಾಗ ತಿಳಿದಿರುತ್ತದೆ ಎಂದರೆ ಕರಾರು ಆಗುವ ಒಂದು ವರ್ಷದ ಮುಂಚೆ ಎನ್ನುತ್ತಾರೆ . ಮಾರಾಟದ ಮಾತುಕತೆ ಆದಾಗ ಯಾರೆಲ್ಲಾ ಇದ್ದರು ಎಂದರೆ ರಘುಪತಿ ,ನಾಗಭೂಷಣ ಹಾಗೂ ರಾಮರೆಡ್ಡಿಯವರ ಅಳಿಯ ಕೃಷ್ಣಪ್ಪ ಇದ್ದರು ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಜಮೀನು ಮಾರಾಟ ಮಾಡುತ್ತಿದ್ದಾರೆ ಎಂದು ಗೊತ್ತಾ ಎಂದರೆ ಇಲ್ಲ ಎನ್ನುತ್ತಾರೆ . ಒಂದು ವರ್ಷ ದ ಮುಂಚೆ ಮಾರಾಟ ಮಾಡುತ್ತಾರೆ ಎಂದು ತಿಳಿದಾಗ ಅದೇ ದಿನ ಮಾತುಕತೆ ಸಹ ಆಗಿದೆಯಾ ಅಂದರೆ ಆಗಿದೆ ಎನ್ನುತ್ತಾರೆ . ಆ ದಿನ ಹಣವನ್ನು ಏನಾದರೂ ನೀಡಿರುತ್ತೀರಾ ಎಂದರೆ 50 ಸಾವಿರ ಮುಂಗಡ ಹಣ ನೀಡಿರುತ್ತೇನೆ ಎನ್ನುತ್ತಾರೆ . 50 ಸಾವಿರ ನೀಡಿದ್ದಕ್ಕೆ ಬರವಣಿಗೆ ಏನಾದರೂ ಮಾಡಲಾಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ . ಆ ದಿನ ಮಾರಾಟದ ಬೆಲೆ ಇತ್ಯರ್ಥವಾಗಿರುತ್ತದೆಯೇ ಅಂದರೆ ಹೌದು , 22 ಲಕ್ಷಕ್ಕೆ ಕ್ರಯದ ಮೌಲ್ಯ ನಿಗದಿಯಾಗಿದ್ದು ಉಳಿದ ಹಣವನ್ನು ಕ್ರಯದ ಕರಾರು ಮಾಡುವಾಗ ಕೊಡುವಂತೆ ಮಾತುಕತೆ ಆಗಿರುತ್ತದೆ ಎನ್ನುತ್ತಾರೆ. ಉಳಿದ ಹಣವನ್ನು ಕರಾರಿನ ದಿನ ದಿನಾಂಕ 07.12.2020 ರಂದು ನೀಡಿರುತೀರಾ ಎಂದರೆ ಹೌದು ಎನ್ನುತ್ತಾರೆ . ಕ್ರಯದ ಕರಾರಿನಲ್ಲಿ 50 ಸಾವಿರ ಹಣವನ್ನು ಮೊದಲೇ ನೀಡಲಾಗಿದೆ ದಿನ 19 ಲಕ್ಷ 50 ಸಾವಿರ ಹಣವನ್ನು ನೀಡಲಾಗುತ್ತಿದೆ ಎಂದು ಏನಾದರೂ ಬರವಣಿಗೆ ಆಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ .

ಒಂದು ವರ್ಷದ ಹಿಂದೆ ಮಾತುಕತೆಯಾದಾಗಲೇ ಸಂಪೂರ್ಣ ಹಣವನ್ನು ನೀಡಿ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳಲು ಏನಾದರೂ ತೊಂದರೆ ಇತ್ತೇ ಅಂದರೆ ದಾವಾ ಸ್ವತ್ತಿನ ಪಕ್ಕದಲ್ಲೇ ಅವರಿಗೆ ಸಂಬಂಧಿಸಿದ ಸರ್ವೆ ನಂಬರ್ 23/19 ಕ್ಕೆ ಸಂಬಂಧ ಪಟ್ಟಂತೆ ವ್ಯಾಜ್ಯ ಇದ್ದು ಅದು ಮುಗಿದ ನಂತರ ಕ್ರಯ ಮಾಡುತ್ತೇನೆ ಎಂದು ಹೇಳಿದ್ದರಿಂದ ಆ ದಿನ ಕ್ರಯ ವಾಗಿರುತ್ತದೆ ಎನ್ನುತ್ತಾರೆ. ಅದು ಏನು ವ್ಯಾಜ್ಯ ಎಂದರೆ ಆ ವ್ಯಾಜ್ಯದ ಸಂಪೂರ್ಣ ಮಾಹಿತಿ ಇಲ್ಲ, ವ್ಯಾಜ್ಯದ ಮಾಹಿತಿ ತಿಳಿದು ತಂದು ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಕರಾರು ಆಗುವಾಗ ಪಕ್ಕದ ಜಮೀನಿನ ವ್ಯಾಜ್ಯದ ಬಗ್ಗೆ ಏನಾದರೂ ಪರಶೀಲನೆ ಮಾಡಿರುತೇನೆಯೇ ಅಂದರೆ ದಾವಾ ಸ್ವತ್ತಿಗೂ ಪ್ರತಿವಾದಿಯ ಪಕ್ಕದ ಜಮೀನಿಗೂ ಸಂಬಂಧ ಇಲ್ಲದೇ ಇರುವುದರಿಂದ ಪರಿಶೀಲನೆ ಮಾಡಿರುವುದಿಲ್ಲ ಎನ್ನುತ್ತಾರೆ. ಈ ವಿಚಾರವನ್ನು ಕರಾರಿನಲ್ಲಿ ಬರೆಯಲಾಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ.

ದಿನಾಂಕ 07.12.2020 ರಂದು ದಾವಾ ಸ್ವತ್ತಿನ ಖಾತೆ ಪ್ರತಿವಾದಿ ಹೆಸರಿಗೆ ಇದ್ದು ಅದೇ ಸಮಯದಲ್ಲಿ ದಾವಾ ಸ್ವತ್ತಿನ ಕ್ರಯ ಮಾಡಿಕೊಳ್ಳಲು ತೊಂದರೆ ಇತೇ ಅಂದರೆ ಬಾಕಿ 2 ಲಕ್ಷ ಹಣ ನನ್ನ ಬಳಿ ಆಗ ಇರಲಿಲ್ಲ, ಆದ ಕಾರಣ ಕ್ರಯವಾಗಿರುವುದಿಲ್ಲ ಎನ್ನುತ್ತಾರೆ. ಕ್ರಯದ ಕರಾರು ಅಗುವ 1 ವರ್ಷದ ಮುಂಚೆ ಮಾತುಕತೆ ಆದಾಗ ನನ್ನ ಬಳಿ 22 ಲಕ್ಷ ಹಣ ಇತ್ತೇ ಅಂದರೆ 20 ಲಕ್ಷ ಇದ್ದು 50 ಸಾವಿರ ಮುಂಗಡ ನೀಡಿ ಕರಾರಿನ ದಿನ 19 ವರೆ ಲಕ್ಷ ನೀಡಿರುತೇನೆ ಎನ್ನುತ್ತಾರೆ. ಬಾಕಿ 2 ಲಕ್ಷ ಹಣವನ್ನು ಹೊಂದಿಸಲು ನನಗೆ ಎಷ್ಟು ಕಾಲಾವಕಾಶ ಬೇಕಿತ್ತು ಎಂದರೆ ನನಗೆ 1 ತಿಂಗಳು ಸಾಕಾಕಿತ್ತು ಆದರೆ ಪ್ರತಿವಾದಿ ತಯಾರಿರಲಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಕ್ರಯವಾಗಲು ಬಾಕಿ 2 ಲಕ್ಷ ಹಣವನ್ನು ಹೊರತುಪಡಿಸಿ ಬೇರೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ, ಆದರೆ ಅವರು ಮಾಡಿಕೊಟ್ಟಿಲ್ಲ ಎನ್ನುತ್ತಾರೆ. ನಾನು ಸಂಪೂರ್ಣ ಹಣವನ್ನು ಕರಾರಿನ ದಿನವೇ ಸಂಪೂರ್ಣ ಹಣ ನೀಡಿದ್ದರೇ ನನ್ನ ಪ್ರಕಾರ ಪ್ರತಿವಾದಿ ದಾವಾ ಸ್ವತ್ತಿನ ಕ್ರಯ ಮಾಡಿಕೊಡುತ್ತಿದ್ದರು ಎಂದರೆ ಆಗಲೂ ಸಹ ಪ್ರತಿವಾದಿ ಕ್ರಯ ಮಾಡಲು ಸಮಯ ತೆಗೆದುಕೊಳ್ಳುತ್ತಿದ್ದರು ಎನ್ನುತ್ತಾರೆ. ಕರಾರಿನಲ್ಲಿ ದಾವಾ ಸ್ವತ್ತನ್ನು ಕ್ರಯ ಮಾಡಲು ಎಷ್ಟು ವಾಯಿದೆ ಇಡಲಾಗಿದೆ ಎಂದರೆ 18 ತಿಂಗಳು ಎನ್ನುತ್ತಾರೆ. ನನಗೆ ಬಾಕಿ 2 ಲಕ್ಷ ಹಣವನ್ನು ಸಂಗ್ರಹಿಸಲು 1 ತಿಂಗಳು ಸಾಕಾಗಿದ್ದು ಆದರೂ ಸಹ 18 ತಿಂಗಳು ಕ್ರಯ ಮಾಡಲು ಯಾಕೆ ಕರಾರಿನಲ್ಲಿ ನಮೂದು

ಮಾಡಿಸಲಾಗಿದೆ ಎಂದರೆ ಅದನ್ನು ಪ್ರತಿವಾದಿ ಮಾಡಿಸಿದ್ದು ಅವರನ್ನು ಕೇಳಬೇಕು ಎನ್ನುತ್ತಾರೆ . ದಾವಾ ಸ್ವತ್ತಿನ ಮಾರಾಟದ ಕ್ರಯದ ಕರಾರು ಆದ ವಿಚಾರ ಕೃಷ್ಣಪ್ಪ ರವರಗೆ ಗೊತ್ತಾ ಎಂದರೆ ಗೊತ್ತು ಎನ್ನುತ್ತಾರೆ . ಕ್ರಯದ ಕರಾರಿಗೆ ಕೃಷ್ಣಪ್ಪ ನವರು ಸಹಿ ಮಾಡಿರುತ್ತಾರೆ. ಈ ದಾವೆಯ ಕ್ರಯದ ಕರಾರು ದಿನಾಂಕ07.12.2020 ರಂದು ಆಗುವ ಪೂರ್ವದಲ್ಲಿ ದಿನಾಂಕ 14.06.2019 ರಂದು ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ನೊಂದಾಯಿತ ಕ್ರಯ ಕರಾರು ಸಹ ಆಗಿತ್ತು ಎಂದರೆ ಸರಿ . ಸದರಿ ಕ್ರಯದ ಕರಾರು ಏನಾಯಿತು ಎಂದು ಈ ದಾವೆಯಲ್ಲಿ ಹೇಳಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ನೊಂದಾಯಿತಿ ಕ್ರಯದ ಕರಾರನ್ನು ರದ್ದು ಮಾಡಲು ನೊಂದಾಯಿತ ರದ್ದಾಯಿತಿ ಪತ್ರ ಏನಾದರೂ ಮಾಡಲಾಗಿದೆಯಾ ಅಂದರೆ ಹೌದು ಎನ್ನುತ್ತಾರೆ . ಸದರಿ ರದ್ದಾಯಿತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ .

ಸದರಿ 2019 ರ ಕ್ರಯದ ಕರಾರು ಪತ್ರದಲ್ಲಿ ಇರುವ ಒಕ್ಕಣಿಕೆ ಮತ್ತು ಈ ದಾವೆಯಲ್ಲಿ ಇರುವ ನಿಪಿ 1 ರ ಒಕ್ಕಣಿಕೆಯೂ ಒಂದೇ ಆಗಿರುತ್ತದೆ ಎಂದರೆ ಸರಿ . ಸದರಿ 2019 ರ ಕರಾರಿನನ್ವಯ ಪ್ರತಿವಾದಿಗೆ ಲೀಗಲ್ ನೋಟಿಸ್ ಏನಾದರೂ ನೀಡಲಾಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ . ನಿಪಿ 1 ರಲ್ಲಿ 2019 ರ ಕ್ರಯದ ಕರಾರಿನ ಬಗ್ಗೆ ಬರವಣಿಗೆ ಆಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ . 2019 ನೇ ಇಸವಿ ಕರಾರು ಆದ ನಂತರ ಕೋವಿಡ್ ಬಂದಿರುತ್ತದೆ ಎಂದರೆ ಸರಿ. ಹಳೆಯ ಕರಾರಿನ ಪ್ರಕಾರ ದಾವಾ ಸ್ವತ್ತಿನ ಕ್ರಯ ಮಾಡಲು ತೊಂದರೆ ಇತ್ತಾ ಎಂದರೆ ಪಕ್ಕದ ಜಮೀನಿನ ವ್ಯಾಜ್ಯ ಇತ್ತು ಎಂದು ಹೇಳಿರುತ್ತೇನೆ ಎನ್ನುತ್ತಾರೆ . ಸದರಿ ಹಳೇ ಕರಾರಿನಲ್ಲಿ ಪಕ್ಕದ ಜಮೀನಿನ ವ್ಯಾಜ್ಯದ ಬಗ್ಗೆ ಉಲ್ಲೇಖ ಇದೆಯಾ ಅಂದರೆ ಇಲ್ಲ ಎನ್ನುತ್ತಾರೆ . ದಿನಾಂಕ 07.12.2020 ರಲ್ಲಿ ಮತ್ತೆ ಪುನಃ ಕರಾರಿನನ್ವಯ ದುಡ್ಡನ್ನು ನೀಡಿರುತ್ತೇನೆ ಎಂದರೆ ಇಲ್ಲ ಎನ್ನುತ್ತಾರೆ . ನಿಪಿ 1 ರಲ್ಲಿ 20 ಲಕ್ಷ ಮುಂಗಡ ಹಣವನ್ನು ದಿನಾಂಕ 07.12.2020 ರಂದು ಕೊಟ್ಟಂತೆ ಬರೆಯಲಾಗಿದೆ ಎಂದರೆ ಸರಿ . ನಾನು ವ್ಯವಸಾಯ ಮಾಡುತ್ತೇನೆ, ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ . ಸಾಕ್ಷಿಗೆ ದಿನಾಂಕ 14.06.2019 ರ ಕ್ರಯದ ಕರಾರಿನ ನಕಲು ಪ್ರತಿಯನ್ನು ತೋರಿಸಿ ಅದರ ಮೊದಲು ಪುಟದಲ್ಲಿರುವ ಕೈಬರವಣಿಗೆಯನ್ನು ತೋರಿಸಿ ಅದು ನಾನು ಬರೆದ ಬರವಣಿಗೆ ಎಂದು ಕೇಳಲಾಗಿ ಸಾಕ್ಷಿ ಅದು ನನ್ನದ್ದಲ್ಲ ಎನ್ನುತ್ತಾರೆ .

ದಿನಾಂಕ 14.06.2019 ರ ಕರಾರು ಕ್ರಯದ ಕರಾರು ಅಲ್ಲ ಅದು ಸಾಲದ ಭದ್ರತೆಗಾಗಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡೆದ ಸಾಲಕ್ಕೆ ಬಡ್ಡಿಯನ್ನು ಕೊಡುತ್ತಾ ಬರುತ್ತಿದ್ದರು ನಂತರ ಕೋವಿಡ್ ಬಂದ ಮೇಲೆ ಬಡ್ಡಿಯನ್ನು ಕೊಡಲು ಆಗಿರುವುದಿಲ್ಲ ಲಎಂದರೆ ಸರಿಯಲ್ಲ. ನಾನು ಅವರಿಗೆ ಒತ್ತಡ ಮಾಡಿದ್ದಕ್ಕೆ ದಿನಾಂಕ 23.10.2020 ರಂದು 8 ತಿಂಗಳ ಬಡ್ಡಿ 3 ಲಕ್ಷ 60 ಸಾವಿರ ಹಣವನ್ನು ಪ್ರತಿವಾದಿ ನನಗೆ ನೀಡಿದ್ದು ಆ ಬಗ್ಗೆ ನಾನು 2019 ರ ಕರಾರಿನ ನಕಲು ಪ್ರತಿ ಮೇಲೆ ಹಣ ಸಂದಾಯವಾದ ಬಗ್ಗೆ ಬರವಣಿಗೆ ಮಾಡಿ ಸಹಿ ಕೂಡ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ನಂತರ 2 ತಿಂಗಳ ಬಡ್ಡಿಯನ್ನು ಪ್ರತಿವಾದಿ ನೀಡಿರುತ್ತಾರೆ. ಆವಾಗಾಗಲೇ ಕರಾರಿನ 18 ತಿಂಗಳ ಕಾಲಮಿತಿ ಮುಗಿದಿದ್ದರಿಂದ ನಿಪಿ 1 ನ್ನು ಪ್ರತಿವಾದಿಗೆ ಹೇಳಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಿಂದಿಗೂ ಸಹ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ, ನನಗೆ ಸ್ವತ್ತನ್ನು ಖರೀದಿ ಮಾಡುವ ಉದ್ಧೇಶ ಸಹ ಇರಲಿಲ್ಲ, ಸಾಲದ ಸಂಬಂಧ ಕ್ರಯದ ಕರಾರು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ಕ್ರಯದ ಕರಾರು ದಾವಾ ಸ್ವತತನ್ನು ಖರೀದಿ ಮಾಡುವ ಸಂಬಂಧ ಮಾಡಿದ ಪಕ್ಷದಲ್ಲಿ 2019 ರ ಕರಾರಿನಡಿಯಲ್ಲಿ ಸ್ವತತನ್ನು ಕ್ರಯ ಮಾಡಿಸಿಕೊಳ್ಳುತ್ತಿದ್ದೆ ಇದು ಸಾಲದ ವ್ಯವಹಾರವಾದದ್ದರಿಂದ ದಿನಾಂಕ 07.12.2020 ರಂದು ನಿಪಿ 1 ನ್ನು ಸೃಷ್ಟಿ ಮಾಡಿರುತೇನೆ ಎಂದರೆ ಸರಿಯಲ್ಲ.

ಮುಂಗಡ ಹಣವಾಗಿ ಪ್ರತಿವಾದಿ ನನ್ನಿಂದ 20 ಲಕ್ಷ ಹಣವನ್ನು ಯಾವತ್ತು ಪಡೆದಿಲ್ಲ ಮತ್ತು ಆ ಸಂಬಂಧ ಕ್ರಯದ ಕರಾರನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕರಾರಿನ ಪ್ರಕಾರ ನಾನು ಪ್ರತಿವಾದಿಯಿಂದ ಬಡ್ಡಿಯನ್ನು ಪಡೆಯುತ್ತಾ ಬಂದಿರುತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕಾಮಸಮುದ್ರ ರಸ್ತೆಗೆ ತಾಗಿಕೂಂಡಿದೆಯಾ ಅಂದರೆ ಇಲ್ಲ ಪ್ರತಿವಾದಿಯ ಸರ್ವೆ ನಂಬರ್ 23/19 ರ ಜಮೀನಿನ ನಂತರ ದಾವಾ ಸ್ವತ್ತು ಬರುತ್ತದೆ ಎನ್ನುತ್ತಾರೆ. ದಾವಾ ಸ್ವತ್ತಿನ ಈಗಿನ ಬೆಲೆ 1 ರಿಂದ 1 ವರೆ ಕೋಟಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ಸಾಲದ ಹಣ ಬಡ್ಡಿಯನ್ನು ಸರಿಯಾಗಿ ಕಟ್ಟಿಕೊಂಡು ಬಂದಿದ್ದರೂ ಸಹ ಸುಳ್ಳು ಕ್ರಯದ ಕರಾರಿನ ಆದಾರದ ಮೇರೆಗೆ ಈ ಸುಳ್ಳು ದಾವೆ ಸಲ್ಲಿಸಿ ಈ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎರಡೂ ಕರಾರುಗಳು ಕ್ರಯದ ಬಾಬತ್ತು ಆಗಿಲ್ಲ

ಸಾಲದ ಬಾಬತ್ತು ಆದ್ದರಿಂದ ಅದರಲ್ಲಿ ಕಾಲಮಿತಿಯನ್ನು 18 ತಿಂಗಳು ಇಡಲಾಗಿದೆ ಎಂದರೆ ಸದರಿ ಕಾಲಮಿತಿಯನ್ನು ಪ್ರತಿವಾದಿಯೇ ಬರೆಸಿರುತ್ತಾರೆ ಎನ್ನುತ್ತಾರೆ . ಆ ರೀತಿ ಬರೆಸಿದ್ದು ಸಾಲದ ಹಣವನ್ನು ಮರು ಪಾವತಿ ಮಾಡಲು ಎಂದರೆ ಅಲ್ಲ , ಕ್ರಯದ ಬಾಬತ್ತು ಎನ್ನುತ್ತಾರೆ . ನಿಪಿ 1 ರಂತೆ ಪ್ರತಿವಾದಿ ನನಗೆ ಯಾವುದೇ ಕ್ರಯ ಪತ್ರವನ್ನು ಮಾಡಿಕೊಡುವ ಬಾಧ್ಯಸ್ಥರು ಅಲ್ಲ ಅದು ಕೇವಲ ಸಾಲದ ಪತ್ರ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಪ್ರತಿವಾದಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ . ಪ್ರತಿವಾದಿಯ ತಕರಾರಿನಲ್ಲಿ ದಿನಾಂಕ 23.10.2020 ರಂದು 8 ತಿಂಗಳ ಬಡ್ಡಿ ನನಗೆ ಕೊಟ್ಟ ಬಗ್ಗೆ ಮತ್ತು ಅದನ್ನು ಹಿಂಬರಹದೊಂದಿಗೆ ಸ್ವೀಕರಿಸಿದ ಬಗ್ಗೆ ಉಲ್ಲೇಖಿಸಿದ್ದು ಅದನ್ನು ತಿಳಿದುಕೊಂಡು ನಾನು 2019 ರ ಕರಾರಿನ ನಕಲನ್ನು ತೋರಿಸಿದಾಗ ಅದರಲ್ಲಿರುವ ಬರವಣಿಗೆ ನನ್ನದ್ದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ರಘುಪತಿ ನನಗೆ 20 ವರ್ಷದಿಂದ ಪರಿಚಯ . ಕೃಷ್ಣಪ್ಪನವರಿಂದ ರಘುಪತಿಯ ಪರಿಚಯ ಎಂದರೆ ಇಲ್ಲ , ರಘುಪತಿಯೇ ಕೃಷ್ಣಪ್ಪನೇ ಪರಿಚಯ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ರಘುಪತಿಯವರಿಗೂ ಕರಾರಿನ ವಿಚಾರ ಗೊತ್ತಿದೆಯಾ ಅಂದರೆ ಗೊತ್ತಿದೆ ಎನ್ನುತ್ತಾರೆ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**(ರಹೀಮ್ ಅಲಿ ಎಮ್ ನದಾಫ್)**
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ **(ಸಂಚಾರಿ ಪೀಠ ಬಂಗಾರಪೇಟೆ).**